ರಾಜ್ಯದ ಅಂಗನವಾಡಿ ಕೇಂದ್ರಗಳ ಬಗ್ಗೆ

೯೨೬. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ?

ಆ) ಇವುಗಳ ಕಾರ್ಯಕ್ರಮವೇನು?

ಇ) ಈ ಕೇಂದ್ರಗಳಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ಪ್ರತಿ ಕೇಂದ್ರಕ್ಕೆ ವೈದ್ಯರು ಭೇಟಿ ನೀಡುವಂತೆ ಸೂಚಿಸಲಾಗಿದೆಯೇ ಹಾಗೂ ಎಷ್ಟು ತಿಂಗಳಿಗೊಮ್ಮೆ ಭೇಟಿ ನೀಡುವರು ಮತ್ತು ಏನು ಚಿಕಿತ್ಸೆ ಮಾಡುವರು?

ಉ) ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುವ ಸಂಬಳವನ್ನು ಹೆಚ್ಚಿಸುವ ಉದ್ದೇಶ ಸರಕಾರದವರಿಗಿದೆಯೇ?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯದಲ್ಲಿ ೮೬ ಸಮಗ್ರ ಬಾಲವಿಕಾಸ ಯೋಜನೆಗಳಲ್ಲಿ ಒಟ್ಟು ೧೩,೨೬೩ ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು ೭೮ ಯೋಜನೆಗಳಲ್ಲಿ ೧೧,೭೫೫ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ೧೯೮೫-೮೬ರಲ್ಲಿ ಮಂಜೂರಾದ ೮ ಹೊಸ ಯೋಜನೆಗಳಲ್ಲಿ ೧,೪೬೮ ಅಂಗನವಾಡಿ ಕೇಂದ್ರಗಳು ಪ್ರಾರಂಭವಾಗಬೇಕಾಗಿದ್ದು ಅವು ಡಿಸೆಂಬರ್ ೮೫ ರಿಂದ ಹಂತ ಹಂತವಾಗಿ ಪ್ರಾರಂಭವಾಗುತ್ತಿವೆ.

ಆ) ಸಮಗ್ರ ಬಾಲ ವಿಕಾಸ ಯೋಜನೆಯಡಿಯಲ್ಲಿ ೦-೬ ವರ್ಷದ ಆಯ್ದ ಮಕ್ಕಳಿಗೂ ಹಾಗೂ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ಒದಗಿಸುವುದು, ಮಕ್ಕಳಿಗೆ ರೋಗ ನಿರೋಧಕ ಚುಚ್ಚು ಮದ್ದು ನೀಡಿಕೆ, ಆರೋಗ್ಯ ತಪಾಸಣೆ ಸಲಹಾ ಸೇವೆ ಆರೋಗ್ಯ ಹಾಗೂ ಪೌಷ್ಟಿಕತೆ ಬಗ್ಗೆ ಶಿಕ್ಷಣ ಹಾಗೂ ೩-೬ ವರ್ಷದ ಮಕ್ಕಳಿಗೆ ಪ್ರಾಥಮಿಕ ಪೂರ್ವ ಶಿಕ್ಷಣ ಒದಗಿಸುವುದು. ಈ ಯೋಜನೆಯನ್ವಯ ಹಾಕಿಕೊಂಡಿರುವ ಕಾರ್ಯಕ್ರಮಗಳು.

ಇ) ಹೌದು.

ಈ) ಆರೋಗ್ಯ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ವತಿಯಿಂದ ಯೋಜನೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ವೈದ್ಯಾಧಿಕಾರಿಗಳಿಗೂ ಭೇಟಿ ನೀಡುವಂತೆ ಸುತ್ತೋಲೆಯ ಮೂಲಕ ಸೂಚಿಸಲಾಗಿದೆ. ಪ್ರತಿ ವೈದ್ಯಾಧಿಕಾರಿಗೂ ಅವರು ಭೇಟಿ ನೀಡಬೇಕಾದ ಅಂಗನವಾಡಿ ಕೇಂದ್ರಗಳನ್ನು ನಿಗದಿಪಡಿಸಲಾಗಿದೆ. ೩ ತಿಂಗಳಿಗೊಮ್ಮೆ ವೈದ್ಯಾಧಿಕಾರಿಗಳು ಕೇಂದ್ರಕ್ಕೆ ಭೇಟಿ ನೀಡಿ, ಪೌಷ್ಟಿಕಾಂಶದ ಕೊರತೆಯ ಮಕ್ಕಳನ್ನು ಮತ್ತು ತೀವ್ರ ತರಹದ ಅನಾರೋಗ್ಯಕ್ಕೆ ತುತ್ತಾಗಿರುವ ಮಕ್ಕಳನ್ನು ಹಾಗೂ ಗರ್ಭಿಣಿ ಬಾಣಂತಿಯರ ಆರೋಗ್ಯ ತಪಾಸಣೆ ಮಾಡುವರು.

ಮಗುವಿಗೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ತಜ್ಞ ವೈದ್ಯರ ಬಳಿಗೆ ಮಗುವನ್ನು ಕಳುಹಿಸಲಾಗುವುದು. ಅಗತ್ಯಬಿದ್ದರೆ ಆಸ್ಪತ್ರೆಗೆ ಮಗುವನ್ನು ಕರೆದೊಯ್ಯಲು ಯೋಜನೆಯ ವಾಹನವನ್ನು ಉಪಯೋಗಿಸಲು ಯೋಜನಾಧಿಕಾರಿಗೆ ಆದೇಶಿಸಲಾಗಿದೆ.

ಉ) ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವುದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರವೇ ಕ್ರಮ ಕೈಗೊಳ್ಳಬೇಕಾಗಿದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ೧೧,೭೫೫ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದ್ದಾರೆ. ಅವರಲ್ಲಿ ಒಂದು ವಿಷಯ ಕೇಳುತ್ತೇನೆ ಎಷ್ಟು ಕೇಂದ್ರಗಳಿಗೆ ಕಟ್ಟಡಗಳಿವೆ? ಎರಡನೆಯದಾಗಿ, ಬಾಲ ವಿಕಾಸ ಯೋಜನ ಅನ್ವಯ ವೈದ್ಯಕೀಯ ಸೌಲಭ್ಯ ಕಲ್ಪಿಸಿ ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಎಷ್ಟು ಕೇಂದ್ರಗಳಿಗೆ ಡಾಕ್ಟರು ಭೇಟಿ ಕೊಡುತ್ತಾರೆ ೩ ತಿಂಗಳಿಗೊಮ್ಮೆ ವೈದ್ಯಾಧಿಕಾರಿಗಳು ಭೇಟಿ ಕೊಡುತ್ತಾರೆ ಎಂದು ಹೇಳಿದ್ದಾರೆ. ಆದರೆ ಈ ದೇಶದಲ್ಲಿ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಅವರ ಯೋಗಕ್ಷೇಮವನ್ನು ಕಾಪಾಡುವ ಮಂತ್ರಾಂತರ ದೇಶದಲ್ಲಿ ಭವ್ಯ ಭವಿಷ್ಯವನ್ನು ಕಾಣಬೇಕೆಂದು ಯೋಚನೆ ಮಾಡುತ್ತಿರುವಾಗ ಡಾಕ್ಟರುಗಳ ಸೌಲಭ್ಯ ಸಾಲುತ್ತಿಲ್ಲ.

ಆದ್ದರಿಂದ ಪ್ರತಿಯೊಂದು ಕೇಂದ್ರಕ್ಕೆ ಪ್ರತಿ ತಿಂಗಳು ವೈದ್ಯರು ಭೇಟಿ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ ಅಂಗನವಾಡಿ ಕಾರ್ಯಕರ್ತರಿಗೆ ಸಂಬಳ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕೇ ಹೊರತು ರಾಜ್ಯ ಸರ್ಕಾರಕ್ಕೆ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಆದರೆ ನಾನು ಕೇಳ ಬಯಸುತ್ತೇನೆ ಈ ರಾಜ್ಯ ಸರ್ಕಾರದವರಿಗೆ ಜವಾಬ್ದಾರಿ ಏನೂ ಇಲ್ಲವೆ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಸಾಧ್ಯವಾದಷ್ಟು ಕಡೆ ಕಟ್ಟಡಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಶಿವಣ್ಣ.—ಎಷ್ಟಾಗಿದೆ ಎಂದು ಕೇಳಿದ್ದೇನೆ?

ಶ್ರೀ ವಿ. ಎಲ್. ಪಾಟೀಲ್.—ಕಟ್ಟಡಗಳನ್ನು ಕಟ್ಟಬೇಕೆಂಬ ವಿಷಯ ಯೋಚನೆಯಲ್ಲಿದೆ. ಎರಡನೆಯದಾಗಿ ಮಕ್ಕಳಿಗೆ ಔಷಧ ಕೊಡುವ ವಿಷಯ ಅವರು ಹೇಳಿದ್ದಾರೆ. ಮೂರು ತಿಂಗಳಿಗೊಮ್ಮೆ ಪ್ರತಿ ಕೇಂದ್ರಕ್ಕೆ ವೈದ್ಯರು ಭೇಟಿ ಕೊಡುತ್ತಿದ್ದಾರೆ. ನಮ್ಮ ಇಲಾಖೆಯವರು ಹಾಗೂ ಆರೋಗ್ಯ ಇಲಾಖೆಯವರು ಮೇಲಿಂದ ಮೇಲೆ ಇದನ್ನು ರೆವ್ಯೂ ಮಾಡುತ್ತಾರೆ. ಎಲ್ಲಿ ಅವಶ್ಯವಿದೆ ಅಲ್ಲಿ ಹೆಚ್ಚು ಸಾರಿ ವೈದ್ಯರು ಭೇಟಿ ಕೊಡುತ್ತಾರೆ. ಅಂಗನವಾಡಿ ಕಾರ್ಯಕರ್ತರ ವಿಷಯದಲ್ಲಿ ಈ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ ಎಂದು ಕೇಳಿದ್ದಾರೆ. ಅವರಿಗೆ ಹೆಚ್ಚು ಸೌಲಭ್ಯ ಕೊಡಬೇಕೆಂದು ಕೇಳಿದಾಗ ಎಸ್.ಎಸ್.ಎಲ್.ಸಿ. ಪೂರ್ವ ಮತ್ತು ನಂತರದವರಿಗೆ ೫೫ ರೂಪಾಯಿ ಮತ್ತು ೨೦೦ ರೂಪಾಯಿಗಳನ್ನು ಏನು ಕೊಡುತ್ತಿದ್ದರು ಅದನ್ನು ೧೬೫ ಮತ್ತು ೨೦೦ ರೂಪಾಯಿಗೆ ಹೆಚ್ಚಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ ಎಂದು ಕೇಳಿದ್ದಾರೆ. ನಮ್ಮ ರಾಜ್ಯದ ವತಿಯಿಂದ ಮೂರನೆತ್ತು ಕೇಂದ್ರಗಳನ್ನು ನಾವು ನಡೆಸುತ್ತಿದ್ದೇವೆ. ಬಹುಶಃ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಯಾವ ರಾಜ್ಯದವರು ನಡೆಸುತ್ತಿಲ್ಲ ಎಂದು ನಾನು ಅಭಿಮಾನದಿಂದ ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಅಂಗನವಾಡಿ ಸ್ಕೀಂ ಪ್ರಕಾರ ಪೂರ್ಣ ಹಣ ಕೇಂದ್ರ ಸರ್ಕಾರದಲ್ಲವೆ?

ಅಧ್ಯಕ್ಷರು.—ಟೈಂ ಆಗುತ್ತಿದೆ. ಈಗಾಗಲೇ ಅರ್ಧ ಗಂಟೆ ಆಯಿತು. ಇನ್ನೂ ಹತ್ತು ಪ್ರಶ್ನೆಗಳಿವೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿ. ಎಲ್. ಪಾಟೀಲ್.—ಹೌದು, ಕೇಂದ್ರ ಸರ್ಕಾರದವರು ಕೊಡುತ್ತಾರೆ.

ರಾಜ್ಯದಲ್ಲಿ ಪ್ರವಾಹ ತಡೆ ಹಾಗೂ ನೀರಾವರಿ ಯೋಜನೆಗಳು

*೫೫೫. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ) —ಮಾನ್ಯ ಲೋಕೋಪಯೋಗಿ ಕಾಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಅನ್ವೇಷಣೆ ಮಾಡಿ ಸಾಧ್ಯವೆಂದು ರುಜುವಾತಾದ ಪ್ರವಾಹ ನಿವಾರಣೆ ಹಾಗೂ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಆ) ಅವುಗಳ ಹೆಸರು ಮತ್ತು ಅಂದಾಜು ಮತ್ತು ನೀರಾವರಿ ಸಂಭಾವ್ಯ ವಿವರಗಳು.

ಇ) ಪ್ರವಾಹ ನಿವಾರಣೆ ಹಾಗೂ ನೀರಾವರಿ ಯೋಜನೆಗಳಿಗೆ ವಿಶೇಷ ಕೇಂದ್ರ ಕೊಡುಗೆ ಮತ್ತು ಧನ ಸಹಾಯವೇನಾದರೂ ಮೀಸಲಿಟ್ಟಿದ್ದಾರೆಯೇ?

ಈ) ರಾಜ್ಯದಲ್ಲಿ ಕಾರ್ಯಗತವಾಗುತ್ತಿರುವ ಇಂತಹ ಯೋಜನೆಗಳ ಸಂಖ್ಯೆ ಎಷ್ಟು?

ಉ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಇಂತಹ ಯೋಜನೆಗಳಿಗೋಸ್ಕರ ಉಪಯೋಗ ಪಡೆದ ಕೇಂದ್ರ ಕೊಡುಗೆಯ ಹಣವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯಾವುವೂ ಇಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.